"ಖಂಡಿತಾ ಆಗಬಹುದು. ನನ್ನ ಸಂಶೋಧನೆಯ ಮುಂದಿನ ಪ್ರಯೋಗ ಪ್ರಾರಂಭವಾಗಲಿ. ನಾಳೆ ನೀನು ಬೆಳಗ್ಗೆ ಕಾರಿನಲ್ಲಿ ಬಾ. ಇದಕ್ಕಿಂತ ಮುಂಚೆ ನನ್ನ ಒಂದೆರಡು ಶರತ್ತುಗಳನ್ನು ನೀನು ಕೇಳಬೇಕು..." ಎಂದರು. ನಾನು "ಹೇಳಿ ಸರ್..." ಎಂದೆ.

"ರೋಬೋವನ್ನು ಸಾರ್ವಜನಿಕ ವಾಹನದಲ್ಲಿ ಸಾಗಿಸಬಾರದು. ಅದರ ಯಾವುದೇ ಭಾಗವನ್ನು ಬಿಚ್ಚುವ ಪ್ರಯತ್ನ ಮಾಡಬಾರದು. ನೂರು ಮೀಟರಿನ ಅಂತರದವರಗೆ ಕಾರ್ಯಕ್ಷಮತೆಯುಳ್ಳ ಒಂದು ವಿಶಿಷ್ಟವಾದ ರಿಮೋಟ್ ವಿದ್ಯುತ್ ಚಾರ್ಜರ್ ಕೊಡುತ್ತೇನೆ. ಅದನ್ನು ಯಾವಾಗಲೂ ಚಾಲನೆಯಲ್ಲಿಟ್ಟಿರಬೇಕು. ರೋಬೋ ಒಂದು ಬಾರಿ ಸಂಪೂರ್ಣವಾಗಿ ಚಾರ್ಜ್ ಆದನಂತರ ಚಾರ್ಜರ್ ಹಸಿರು ಬಣ್ಣಕ್ಕೆ ತಿರುಗುತ್ತದೆ. ನಂತರ ರೋಬೋ ಚಾರ್ಜರಿನ ಅವಶ್ಯಕತೆಯಿಲ್ಲದೆ ಒಂದು ವಾರ ಕಾರ್ಯ ನಿರ್ವಹಿಸಬಲ್ಲದು. ಆಹಾರ ಸೇವನೆ, ಪಚನಕ್ರಿಯೆಗಳನ್ನು ಹೊರತುಪಡಿಸಿ ರೋಬೋ ಸಂಪೂರ್ಣವಾಗಿ ಮಾನವರಂತೆ ಕಾರ್ಯ ನಿರ್ವಹಿಸುವಂತೆ ವಿನ್ಯಾಸಗೊಳಿಸಿ ಪ್ರೋಗ್ರಾಮುಗಳನ್ನು ಮಾಡಿದ್ದೇನೆ. ಒಂದು ವೇಳೆ ರೋಬೋ ವ್ಯತಿರಿಕ್ತವಾಗಿ ಕಾರ್ಯನಿರ್ವಹಿಸಲು ಪ್ರಾರಂಭಿಸಿದರೆ ನನಗೆ ತಿಳಿಸಬೇಕು..." ಎಂದರು.

"ಸರಿ ಸರ್... ಥ್ಯಾಂಕ್ಯೂ... ನಾಳೆ ಬರುತ್ತೇನೆ..." ಎಂದು ಎದ್ದೆ. "ಓಕೆ ವಿಶಾಲ್... ಥ್ಯಾಂಕ್ಯೂ ಅಂಡ್ ವಿಶ್ ಯೂ ಆಲ್ ದಿ ಬೆಸ್ಟ್..." ಎಂದು ಹೇಳಿ ನನ್ನನ್ನು ಬೀಳ್ಕೊಟ್ಟರು.

## ಭಾಗ - 3

ರಾತ್ರಿಯೆಲ್ಲಾ ನಿದ್ರೆಯಿಲ್ಲ. ಏನೋ ತಳಮಳ. ಮುಂದಿಟ್ಟ ಹೆಜ್ಜೆಯನ್ನು ಹಿಂದೆ ತೆಗೆಯಬಾರದು. ಪ್ರೊಫೆಸರರಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲೇಬೇಕು. ದೃಢ ನಿರ್ಧಾರ ಮಾಡಿಕೊಂಡೆ.

ಬೆಳಿಗ್ಗೆ ಎದ್ದು ಸಿದ್ಧನಾಗಿ ಸರಿಯಾಗಿ ಒಂಬತ್ತು ಗಂಟೆಗೆ ಫ್ಲ್ಯಾಟಿನಿಂದ ಹೊರಗೆ ಹೊರಟೆ. ನಮ್ಮ ವರ್ಕ್ಸ್ ಮ್ಯಾನೇಜರರಿಗೆ ಫೋನು ಮಾಡಿ ನಾನು ತುರ್ತು ಕೆಲಸವಿರುವುದರಿಂದ ಕಾರ್ಖಾನೆಗೆ ಬರುತ್ತಿಲ್ಲವೆಂದೂ, ಹಾಜರಾತಿಯಲ್ಲಿ ರಜೆ ನಮೂದಿಸುವಂತೆ ತಿಳಿಸಿ, ಕಾರ್ಖಾನೆಯಲ್ಲಿನ ದೈನಂದಿನ ಕಾರ್ಯಗಳ ಬಗ್ಗೆ ಕೆಲವು ಮುಖ್ಯ ಸೂಚನೆಗಳನ್ನು ನೀಡಿ ಅಪಾರ್ಟ್‌ಮೆಂಟಿನ ಬೇಸ್‌ಮೆಂಟಿನಲ್ಲಿದ್ದ ಪಾರ್ಕಿಂಗ್ ಲಾಟಿನತ್ತ ನಡೆದೆ. ಕಾರು ಹತ್ತಿ ಪ್ರೊಫೆಸರರ ಮನೆಯ ಕಡೆಗೆ ಹೊರಟೆ.

ಪ್ರೊಫೆಸರರು ಬಾಗಿಲಿನಲ್ಲಿ ನಿಂತು ನನಗಾಗಿ ಕಾಯುತ್ತಿದ್ದವರು "ಗುಡ್ ಮಾರ್ನಿಂಗ್ ವಿಶಾಲ್... ಬಾ ಒಳಗೆ" ಎಂದು ಸ್ವಾಗತಿಸಿದರು. "ಗುಡ್ ಮಾರ್ನಿಂಗ್ ಸರ್..." ಎಂದು ಮನೆಯ ಒಳಗೆ ಅಡಿಯಿಟ್ಟೆ. ಪ್ರೊಫೆಸರರು ಕೊಠಡಿಯ ಒಳಗೆ ಹೋಗಿ ಹೊರಬಂದರು. ಅವರ ಹಿಂದೆ ಅದೇ ಹೊಸ ಚೂಡಿದಾರ ತೊಟ್ಟಿದ್ದ ಅದೇ ಹುಡುಗಿ! ಮತ್ತೆ ನನ್ನ ತಲೆ ಗಿರ್ರನೆ ತಿರುಗಿ ಇದು ವಾಸ್ತವವೋ ಭ್ರಮೆಯೋ ಎನಿಸತೊಡಗಿತು.

"ವಸೂ... ನೀನು ಸ್ವಲ್ಪ ದಿನ ವಿಶಾಲ್ ಜೊತೆ ಇರಬೇಕು..." ಎಂದು ಪ್ರೊಫೆಸರರು ತುಸು ಕ್ಷೀಣ ದನಿಯಲ್ಲಿ ಹೇಳಿದ್ದು ಯಾಕೆಂದು ತಿಳಿಯಲಿಲ್ಲ. "ಓಕೆ ಡ್ಯಾಡ್..." ಎಂದು ಮುಗುಳ್ನಕ್ಕಳು ಹುಡುಗಿ. ನಾನು ತಡಮಾಡಲಿಲ್ಲ. "ಸರ್, ನಾವು ಹೊರಡುತ್ತೇವೆ..." ಎಂದೆ. "ಓಕೆ" ಎಂದು ಪ್ರೊಫೆಸರ್ ನಮಗೆ ಅನುಮತಿ ನೀಡಿದರು. ನಾನು ಕಾರು ಹತ್ತಿ ಕುಳಿತು ಮುಂದಿನ ಬಾಗಿಲನ್ನು ತೆರೆದೆ. ಹುಡುಗಿ ಕಾರು ಹತ್ತಿ ನನ್ನ ಪಕ್ಕ ಕುಳಿತಳು. ಎಂದೂ ಆಗದ ಯಾವುದೋ ಹೊಸದೊಂದು ಅನುಭವ ನನಗಾಯಿತು. ಪ್ರೊಫೆಸರರು ಬಾಗಿಲಿನಲ್ಲಿಯೇ ನಿಂತು ಕೈಬೀಸಿದರು. ಹುಡುಗಿ ನನಗಿಂತ ಮೊದಲೇ ಅವರಿಗೆ ಕೈ ಬೀಸಿದಳು. ನಾನು ಸುಮ್ಮನೆ ಅವಳತ್ತ ತಿರುಗಿ "ಹೊರಡೋಣವೇ..." ಎಂದು ಮುಗುಳ್ನಕ್ಕೆ.